**ಸಾಕ್ಷಿಯನ್ನು ದಿನಾಂಕಃ 27-09-2024 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀ ಸವಾಲು 3 ಮತ್ತು 4 ನೇ ಪ್ರತಿವಾದಿ ಪರ ವಕೀಲರವರಿಂದಃ**

ನಾನು ವಕೀಲ ವೃತ್ತಿಯನ್ನು ಮಾಡುತ್ತಿದ್ದೇನೆ. ನಾನು ಈ ದಾವೆಯ ಮೂಲ ವಾದಿಯಾಗಿರುವುದಿಲ್ಲ ಎಂದರೆ ಸರಿ. ನಾನು ಮೂಲ ವಾದಿ ಕುಸುಮರವರಿಂದ ಯಾವುದೇ ಅಧಿಕಾರ ಪತ್ರವನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ನಾನು ಮೂಲ ವಾದಿ ಕುಸುಮರವರ ಕಾನೂನು ಬದ್ದ ವಾರಸುದಾರರಲ್ಲ ಎಂದರೆ ಸರಿ. ನಾನು ಮರಣ ಶಾಸನದ ಆಧಾರದ ಮೇಲೆ ಈ ದಾವೆಯಲ್ಲಿ ವಾದಿಯಾಗಿ ಸೇರಿಕೊಂಡಿದ್ದೇನೆ. ಸದರಿ ಮರಣ ಶಾಸನದ ಆಧಾರದ ಮೇಲೆ ನನ್ನ ಹೆಸರಿಗೆ ಖಾತಾ ಬದಲಾವಣೆಯಾಗಿರುವುದಿಲ್ಲ. ಕುಸುಮಾರವರ ಹೆಸರಿಗೆ ಕೂಡ ದಾವಾ ಆಸ್ತಿಯ ದಾಖಲೆಗಳು ವರ್ಗಾವಣೆಯಾಗಿರುವುದಿಲ್ಲ ಎಂದರೆ ಸರಿ. ಕುಸುಮಾರವರು ನನ್ನ ಹೆಸರಿಗೆ ಯಾವುದೇ ಮರಣ ಶಾಸನವನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಹಾಗೂ ಮರಣ ಶಾಸನದ ಸಾಕ್ಷಿದಾರರು ಸೇರಿಕೊಂಡು 1 ಮತ್ತು 2 ನೇ ಪ್ರತಿವಾದಿಯರ ವಿಕ್‌ನೆಸನ್ನು ತಿಳಿದುಕೊಂಡು ವಿಲ್ ನಾಮೆಯನ್ನು ಸುಳ್ಳಾಗಿ ಸೃಷ್ಠಿಸಿದ್ದೇವೆ ಎಂದರೆ ಸರಿಯಲ್ಲ. ವಿಲ್ ನಾಮೆ ಬರೆಯುವ ಕಾಲಕ್ಕೆ ಕುಸುಮರವರು ಆರೋಗ್ಯವಾಗಿದ್ದರು. ವಿಲ್ ಬರೆದು 1 ವರ್ಷದ ನಂತರ ಅವರು ಮರಣ ಹೊಂದಿದರು. ಒಂದು ವರ್ಷದೊಳಗಾಗಿ ಅಂದರೆ ದಿಃ 12.02.2015 ರಂದು ಅವರು ಮೃತಪಟ್ಟರು ಎಂದರೆ ಸರಿ. ಹೃದಯದ ಸಮಸ್ಯೆಯಾದ ಕಾರಣ ಅವರು ಮೃತಪಟ್ಟರು. 3 ಮತ್ತು 4 ನೇ ಪ್ರತಿವಾದಿಯರು 1 ಮತ್ತು 2 ನೇ ಪ್ರತಿವಾದಿಯರ ಹೆಸರಿನಲ್ಲಿದ್ದ 3 ನೇ ದಾವಾ ಸ್ವತ್ತಿನ ದಾಖಲೆಯನ್ನು ಪರಿಶೀಲಿಸಿ ಅದನ್ನು ಖರೀದಿ ಮಾಡಿರುವರು ಎಂದರೆ ಸರಿ. ಖರೀದಿ ಮಾಡಿದ ದಿನದಿಂದ ಮೂರನೇ ದಾವಾ ಆಸ್ತಿ 3 ಮತ್ತು 4 ನೇ ಪ್ರತಿವಾದಿಗಳ ಸ್ವಾಧೀನದಲ್ಲಿರುವುದು ಎಂದರೆ ಸರಿ.

ಖರೀದಿ ಮಾಡಿದ ನಂತರ 3 ಮತ್ತು 4 ನೇ ಪ್ರತಿವಾದಿಗಳು ಸದರಿ ಆಸ್ತಿಯಲ್ಲಿ ಬೋರ್ ಹಾಕಿಸಿರುವರು ಎಂದರೆ ಇರಬಹುದು. 3 ನೇ ದಾವಾ ಆಸ್ತಿಯನ್ನು ಅಡಮಾನ ಮಾಡಿ ಬ್ಯಾಂಕ್‌ನಿಂದ 3 ಮತ್ತು 4 ನೇ ಪ್ರತಿವಾದಿಗಳು ಸಾಲವನ್ನು ಪಡೆದಿರುವರು ಎಂದರೆ ಇರಬಹುದು. 3 ನೇ ದಾವಾ ಆಸ್ತಿಗೆ ಸಂಬಂಧಿಸಿದಂತೆ ನನಗಾಗಲೀ ಹಾಗೂ 1 ಮತ್ತು 2 ನೇ ಪ್ರತಿವಾದಿಗಳಿಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಕಾನೂನು ಬಾಹಿರವಾಗಿ ನಾನು ಈ ದಾವೆಯಲ್ಲಿ ಸೇರ್ಪಡೆಗೊಂಡಿದ್ದೇನೆ ಎಂದರೆ ಸರಿಯಲ್ಲ. 3 ನೇ

ದಾವಾ ಆಸ್ತಿಯನ್ನು ಕಬಳಿಸಲು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 1 ಮತ್ತು 2 ನೇ ಪ್ರತಿವಾದಿಗಳು ಹಾಜರಿಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

27.09.2024

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**